ಶಿವಸಂಗಪ್ಪನ ಕೊಠಡಿಗೆ ಬಂದು ಮರದ ಕುರ್ಚಿಯ ಮ್ಯಾಲೆ ಕುಂತ. ದಣಿವು ಬಂದಿತ್ತು. ಪಲ್ಲಂಗದಲ್ಲಿದ್ದ ಬೀಸಣಿಕೆಯಿಂದ ಗಾಳಿ ಹೊಡೆದುಕೊಂಡ. ಸಲುಪು ಹಿತವಾದಂತಾಯಿತು. ಶಿವಸಂಗಪ್ಪ ಕೊಠಡಿಯಲ್ಲಿ ಇರಲಿಲ್ಲ. ಕಾಲ್ಮಡಿಯಲು ಹೋಗಿರಬೇಕೆಂದು ತಿಳಿದ. ತಕ್ಷಣ ಬಸವಪುರದ ಮಲ್ಲಿಕಾರ್ಜುನಪ್ಪ ನೆನಪಾದ. ತಾನೇ ಬಂಡಿ ಕಟ್ಟಿಸಿಕೊಂಡು ಹೋಗಿ ಬರಲೇನು? ಎಂದು ಯೋಚಿಸಿದ. ಈ ಕಾರ್ಯ ಬ್ಯಾಡೆಂದು ಅವರು ಕೈಬಿಟ್ಟು ಕುಂತಿದ್ದರೆ, ತಾನು ಹೋಗಿ ಮಾಡುವುದೇನು? ಎಂಬ ಪ್ರಶ್ನೆ ಹುಟ್ಟಿತು. ಸಂಕಟವಾಗತೊಡಗಿತು. ಕಲ್ಯಾಣದ ಬಸವಣ್ಣ ನೆನಪಾದ. ಇಂತಹ ನೂರಾರು ಸಮಸ್ಯೆಗಳನ್ನು ಎದುರಿಸಿ, ಗೆದ್ದ ಧೀರಧೀಮಂತ ನೀನು! ಆ ಶಕ್ತಿ ಸಾಮರ್ಥ್ಯ ನನ್ನಂಥ ಹುಲುಮಾನವನಿಗೆ ಎಲ್ಲಿ ಬಂದೀತು! ತಾತನಲ್ಲಿ ಮೆಲ್ಲಗೆ ಉತ್ಸಾಹ ಕುಂದತೊಡಗಿತು. ಕೊನೆಗೆ 'ಆಗುವುದೆಲ್ಲ ಒಳ್ಳೆಯದಕ್ಕೆ' ಎಂದು ಸುಮ್ಮನೆ ಕುಂತ. ಸ್ವಲ್ಪ ಹೊತ್ತಿನಲ್ಲಿ ಶಿವಸಂಗಪ್ಪ ಬಂದು ಮೆಲ್ಲಗೆ ಕುರ್ಚಿ ಮ್ಯಾಲೆ ಕುಂತು, 'ತಾತ, ಉಂಬ ಹೊತ್ತಾಯ್ತು. ನೀನು ಉಂಡುಬಿಡು. ಜತೆಗೆ ನಾನು ಬರ್ತೀನಿ' ಎಂದು ಹೇಳುತ್ತಿದ್ದಂತೆ ಕೊಠಡಿಯ ಮುಂದೆ ನಾಕಾರು ಮಂದಿಯ ಮಾತಿನ ಗದ್ದಲ ಕೇಳಿ ಬಂತು. 'ಬೀಗ್ರು ಬಂದಂಗ ಕಾಣ್ತದ' ಎಂದು ಇಬ್ಬರಿಗೂ ಅನ್ನಿಸ್ತು. ಆ ಗದ್ದಲದ ಬೆನ್ನಿಗೆ ಶಿವಬಸವ, ಶಿವಸಿದ್ಧರಾಮ, ಊರಿನ ಕೆಲ ಹಿರಿಯರು ಒಳ ಬಂದರು. 'ತಾತ, ಅಪ್ಪ, ಆದೀಶ ಬಂದಾನ' ಎಂದು ಹೇಳುತ್ತ, ಮೆಲ್ಲಗೆ ಇಬ್ಬರ ಮುಂದ ನಿಲ್ಲಿಸಿದ. ಆದೀಶ ಇಬ್ಬರಿಗೆ ಬಗ್ಗಿ ನಮಸ್ಕರಿಸಿ ನಿಂತ. 'ಬೀಗ್ರು ಬಂದರಲ್ಲ, ಬಿಸಿಲು ಜಾಸ್ತಿ. ನಿಂಬೇ ಶರಭತ್ತು ಕೊಟ್ಟು ಉಪಚರಿಸ್ರಿ... ಯಜಮಾನ ಮಲ್ಲಿಕಾರ್ಜುನಪ್ಪ ಎಲ್ಲಿ? ಕರಕೊಂಡು ಬರ್ರಿ' ಎಂದು ಶಿವಸಂಗಪ್ಪ ಹೇಳುತ್ತಿದ್ದಾಗ, ಶಿವಸಿದ್ಧರಾಮ ತನ್ನಣ್ಣನನ್ನು ಉಳಿಸಿ ಎಲ್ಲರನ್ನು ಹೊರಗೆ ಕರೆದುಕೊಂಡು ಹೋದ.

'ತಾತ, ಬಸವಪುರದ ಮನ್ಯಾಗ ಸಣ್ಣ ಮಗಳು ರದ್ಧಾಂತ ಮಾಡಿ ಕುಂತಾಳಂತ. ಆದೀಶ ಒಬ್ನೆ ಓಡಿ ಬಂದಾನ' ಎಂದು ಹೇಳುತ್ತಿದ್ದಂತೆ 'ಶಿವಬಸವ... ಶಿವಬಸವ' ಎಂದು ತಾತ ಗಾಬರಿಗೊಂಡ.

'ಯಾಕ ಜಗಳ ತಗದಾಳ?' ಶಿವಸಂಗಪ್ಪ ಕೇಳಿದ.

'ಆದೀಶ, ನೀನೇ ಹೇಳು' ಎಂದು ಇಬ್ಬರ ಮುಂದ ನಿಲ್ಲಿಸಿದ.

'ತಾತ, ಅಪ್ಪ-ಅಮ್ಮ, ಅಣ್ಣಂದಿರು, ಅತ್ತಿಗೆಯರೆಲ್ಲ ನಿನ್ನ ಮಾತಿಗೆ ಒಪ್ಪಿದ್ದರು. ಇವತ್ತು ಇಲ್ಲಿಗೆ ಬರಲು ನಿನ್ನೇ ಮೊನ್ನೆಯಿಂದ ತಯಾರಿ ನಡೆಸಿದ್ದರು. ನಿನ್ನೆ ಸಣ್ಣ ಅಕ್ಕ ಗಂಡನ ಮನೆಯಿಂದ ಬಂಡ್ಯಾಗ ಬಂದು, 'ನನ್ನ ತಮ್ಮನ ಮದುವಿ ನನ್ನ ಮಗ್ಳು ಜತೆನೇ ಆಗ್ಬೇಕು! ಅದು ಬುಟ್ಟು ಗಂಡ ಸತ್ತವಳ ಜತಿಗೆ ನನ್ನ ತಮ್ಮನ ಮದುವಿ ಮಾಡಾಕ ನಿಂತಿದ್ದೀರಲ್ಲ ನಿಮ್ಗೆ ಶನಿ ಬಡಕಂಡಾದೇನು? ನನ್ನ ತಮ್ಮ ಪರದೇಶಿಯಲ್ಲ. ಅವನನ್ನ ಹಾಳು ಬಾವಿಗೆ ನೂಕಾಕ ನಿಂತಿದ್ದೀರಲ್ಲ ನಿಮ್ಗೇನಾಗ್ಯಾದ...?' ಎಂದು ಗೋಳಾಡುತ್ತ ಮನೆ ಹೊಸ್ತಿಲಿಗೆ ಕುಂತುಬಿಟ್ಟಾಳ...'

'ಇದು ನನ್ಗ ಗೊತ್ತಿರಲಿಲ್ಲ!' ತಾತ.

'ಮೊದ್ಲ ವಿಚಾರ ಮಾಡಿದ್ರ ಈ ಫಜೀತಿ ಯಾಕ ಬರ್ತಿತು?' ಶಿವಸಂಗಪ್ಪ.

'ತಾತ, ಸಣ್ಣಕ್ಕನ ಮಗ್ಳಿಗೆ ಈಗ ಏಳು ವರ್ಷ ನಡಿತವ. ನನ್ಗ ಇಪ್ಪತ್ತನಾಲ್ಕು ವರ್ಷ ನಡಿತಿದ್ದಾವ. ಆಕೆ ದೊಡ್ಡವಳಾಗಲು ಆರೇಳು ವರ್ಷಬೇಕು. ಅಪ್ಪ-ಅಮ್ಮ ಬ್ಯಾಡಂದ್ರೂ ಹಟ ಹಿಡದಾಳ. ಆದ್ರೆ ಮನೆಯವರೆಲ್ಲ 'ನೀನು ಕಲ್ಯಾಣಪುರಕ್ಕ ಬಂಡಿ ಕಟ್ಟಿಸಿಕೊಂಡು ಮುಂದ ಹೋಗು' ಅಂದ್ರು. ನಾನು ನಡಕೊಂಡು ಬಂದು ಬಿಟ್ಟದೀನಿ. ಅಕ್ಕನ್ನ ತಣ್ಣಗ ಮಾಡಿ, ಊರಮಂದಿ ಜತೆ ಮನೆಮಂದಿಯಲ್ಲ ಬರ್ತಾರ' ಎಂದು ನಿಶ್ಚಯವಾಗಿ ಹೇಳಿದ.

'ಎಲ್ಲರ ಒಪ್ಪಿಗೆಯಿತ್ತೆಂದು ನಾವು ತಯಾರಿ ಮಾಡಿದ್ದೀವಿ' ಶಿವಸಂಗಪ್ಪ.

'ನನ್ಗ ಶಿವಗೀತ ಬೇಕು ತಾತ. ಅಪ್ಪ, ಶಿವಗೀತನ ಜತೆ ನನ್ನ ಮದವಿ ಮಾಡ್ರಿ' ಎಂದು ಬಗ್ಗಿ ಇಬ್ಬರಿಗೆ ನಮಸ್ಕರಿಸಿದ.

'ಶಿವಬಸ್ವ, ಆದೀಶನನ್ನು ಕರಕೊಂಡು ಮಾನ್ಯಾಗ ಕೂಡಿಸಿ ಮೊದ್ಲು ಉಪಚರಿಸ್ರಿ' ಎಂದು ಕಳಿಸಿದ. ಶಿವಸಂಗಪ್ಪ, ಶಿವಮಲ್ಲಯ್ಯ ತಾತ ಸುಮ್ಮನೆ ಕುರ್ಚಿ ಮ್ಯಾಲೆ ಕುಂತರು.

2

ಶಿವಮಲ್ಲಯ್ಯ ತಾತನಿಗೆ ದಿಕ್ಕು ತಿಳಿಯದಷ್ಟು ಮನಸ್ಸು ಸ್ತಬ್ಧಗೊಂಡಿತು...!

ಎಲ್ಲ ಶುರುವಾದದ್ದು ಎಂಟತ್ತು ತಿಂಗಳ ಹಿಂದ. ಸಿದ್ರಾಮಪುರದ ಶಿವಮಲ್ಲಯ್ಯ ತಾತನ ಮನೆಗೆ



